ನಾನು ಮನೆ ಕೆಲಸದವರೊಂದಿಗೆಯೇ ಇದ್ದು ಬಿಟ್ಟೆ. ಅವಳ ಕೋಣೆಯೊಳಗೆ ಕಾಲಿಡಲೇ ಆಳುಕಾಗುತ್ತಿತ್ತು. ಯಾರ ಬಳಿಯಾದರೂ ಹೇಳುವುದಾದರೂ ಏನನ್ನು? ನನಗೆ ಬೇಗಮ್ ಜಾನ್ ಎಂದರೆ ಭಯವೆಂದೇ? ನನ್ನನ್ನು ಅಷ್ಟು ಪ್ರೀತಿಸುವ ಬೇಗಮ್ ಜಾನ್?

ಅವತ್ತು ರಾತ್ರಿ ರಬ್ಬು ಮತ್ತು ಬೇಗಮ್ ಜಾನ್ ಮತ್ತೆ ಜಗಳಾಡಿದರು. ನನ್ನ ಪಾಲಿಗೆ ಇದು ಪ್ರತಿಕೂಲವೇ. ಏಕೆಂದರೆ, ಬೇಗಮ್ ಜಾನ್‌ಳ ಗಮನ ಕೂಡಲೇ ನನ್ನ ಮೇಲೆ ಬಿದ್ದಿತು. ನಾನು ಚಳಿಯಲ್ಲಿ ಹೊರಗೆ ಅಡ್ಡಾಡಿ ನ್ಯೂಮೋನಿಯಾ ಆಗಿ ಸಾಯಬಹುದು ಎಂದು ಯೋಚನೆ ಬಂದಿತು. "ಪುಟ್ಟಿ, ನೀನು ನನ್ನನ್ನು ಎಲ್ಲರ ಮುಂದೆ ನಾಚಿಕೆಗೇಡು ಮಾಡುತ್ತೀಯಾ? ನಿನಗೇನಾದರೂ ಆದರೆ ಏನು ಗತಿ?" ಅವಳು ಬೋಗುಣಿಯಲ್ಲಿ ಮುಖ ಕೈ ತೊಳೆಯುವಾಗ ನನ್ನನ್ನು ಬಳಿಯಲ್ಲೇ ಕೂರಿಸಿಕೊಂಡಳು. ಅವಳ ಪಕ್ಕದಲ್ಲೇ ಮಣೆಯ ಮೇಲೆ ಚಹಾ ಇರಿಸಲಾಗಿತ್ತು.

"ದಯವಿಟ್ಟು ಚಹಾ ಬೆರೆಸುವೆಯಾ?... ನನಗೂ ಒಂದು ಕಪ್ಪು ಕೊಡು" ಟವೆಲಿನಿಂದ ಮುಖ ಒರೆಸಿಕೊಳ್ಳುತ್ತ ಹೇಳಿದಳು. "ಅಷ್ಟರೊಳಗೆ ನಾನು ಬಟ್ಟೆ ಬದಲಾಯಿಸುತ್ತೇನೆ."

ಅವಳು ಬಟ್ಟೆ ಬದಲಾಯಿಸುತ್ತಿದ್ದಾಗ ನಾನು ಚಹಾ ಕುಡಿಯುತ್ತಿದ್ದೆ.

ಅವಳ ಮಸಾಜ್ ನಡೆಯುವ ಹೊತ್ತಿನಲ್ಲಿ ನನ್ನನ್ನು ಪದೇ ಪದೇ ಕರೆಸುತ್ತಲೇ ಇರುತ್ತಿದ್ದಳು. ನಾನು ಮೋರೆ ತಿರುವಿಕೊಂಡೇ ಹೇಳಿದ ಕೆಲಸ ಮುಗಿಸಿ ಹೊರಗೆ ಓಡುತ್ತಿದ್ದೆ. ಅವಳು ಬಟ್ಟೆ ಬದಲಾಯಿಸುವಾಗ ನನಗೆ ಅಂಜಿಕೆಯಾಗತೊಡಗಿತು. ಮುಖವನ್ನು ಬೇರೆಡೆ ತಿರುಗಿಸಿ ಚಹಾ ಕುಡಿದೆ.

ನನ್ನ ಮನಸು ಯಾತನೆಯಿಂದ ಅಮ್ಮನಿಗಾಗಿ ಹಾತೊರೆಯುತ್ತಿತ್ತು. ನನ್ನ ಅಣ್ಣಂದಿರೊಂದಿಗೆ ಜಗಳಾಡಿದ್ದಕ್ಕೆ ಕೊಡಲ್ಪಟ್ಟ ಈ ಶಿಕ್ಷೆ ಅಗತ್ಯಕ್ಕಿಂತಲೂ ಹೆಚ್ಚೇ ಆಗಿತ್ತು. ಅಮ್ಮನಿಗೆ ನಾನು ಗಂಡು ಹುಡುಗರೊಂದಿಗೆ ಆಡಿದರೆ ಇಷ್ಟವಾಗುತ್ತಿರಲಿಲ್ಲ. ನೀವೇ ಹೇಳಿ, ಅವಳ ಮಗಳನ್ನು ತಿಂದುಬಿಡಲು ಅವರೇನು ನರಭಕ್ಷಕರೇ? ಹಾಗೆ ನೋಡಿದರೆ, ಯಾರು ಈ ಹುಡುಗರು? ನನ್ನದೇ ಅಣ್ಣಂದಿರು ಮತ್ತವರ ಪೀಚಲು ಗೆಳೆಯರು. ಅಮ್ಮನಿಗೆ ಹೆಣ್ಣುಮಕ್ಕಳನ್ನು ಬೇರೆಯಾಗಿ ಇಡಬೇಕೆನ್ನುವುದರಲ್ಲಿ ಬಹಳ ನಂಬಿಕೆ ಇತ್ತು. ಆದರೆ, ಇಲ್ಲಿ ಬೇಗಮ್ ಜಾನ್ ಪ್ರಪಂಚದ ಯಾವುದೇ ರೌಡಿಗಿಂತ ಭಯಾನಕವಾಗಿದ್ದಾಳೆ. ನನ್ನನ್ನು ಕೇಳಿದರೆ ಇಲ್ಲಿರುವುದಕ್ಕಿಂತಲೂ ನಾನು ಆದಷ್ಟು ದೂರ ಹೊರಗಡೆ ರಸ್ತೆಯ ಮೇಲೆ ಓಡುವುದೇ ಒಳಿತು. ಆದರೆ ನನ್ನ ಕೈಲಿ ಏನೂ ಇರಲಿಲ್ಲ. ನನ್ನ ಇಷ್ಟಕ್ಕೆ ವಿರುದ್ಧವಾಗಿ ನಾನು ಅಲ್ಲಿರಬೇಕಾಗಿತ್ತು.

ಬೇಗಮ್ ಜಾನ್ ತುಂಬಾ ಚೆನ್ನಾಗಿ ಅಲಂಕರಿಸಿಕೊಂಡಿದ್ದಳು. ಪರಿಮಳ ಸೂಸುವ ಅತ್ತರ್ ಹಚ್ಚಿಕೊಂಡಿದ್ದಳು. ಆಮೇಲೆ ನನ್ನನ್ನು ಮುದ್ದು ಮಾಡಲು ಶುರುಮಾಡಿದಳು. "ನಾನು ಮನೆಗೆ ಹೋಗಬೇಕು" ಎಂದು ಒಂದೇ ಸಮ ಹಟ ಹಿಡಿದೆ. ಆಮೇಲೆ ನಾನು ಅಳಲಿಕ್ಕೇ ಶುರುಮಾಡಿಬಿಟ್ಟೆ.

"ಓ ಓ... ಬಾ ಇಲ್ಲಿ ನನ್ನತ್ರ... ಇವತ್ತು ನಿನ್ನನ್ನು ಪೇಟೆಗೆ ಕರ್ಕೊಂಡು ಹೋಗ್ತೀನಿ ಸರೀನಾ?"

ಆದರೆ, ನಾನು ಮನೆಗೆ ಹೋಗಬೇಕೆಂದು ಚಂಡಿ ಹಿಡಿಯಲು ಶುರುಮಾಡಿದೆ. ಇಡೀ ಪ್ರಪಂಚದ ಆಟಿಕೆಗಳಾಗಲಿ ಸಿಹಿ ತಿಂಡಿಗಳಾಗಲಿ ನನಗೆ ಬೇಕೆನಿಸಲಿಲ್ಲ.

"ನಿನ್ನ ಅಣ್ಣತಮ್ಮಂದಿರು ಗುದ್ದುತ್ತಾರೆ ನಿನ್ನ, ಘಟಿಂಗಿ" ಪ್ರೀತಿಯಿಂದ ನನ್ನ ಕೆನ್ನೆ ತಟ್ಟುತ್ತ ಹೇಳಿದಳು.

"ಹೊಡೀಲಿ."

"ಮಾವಿನಕಾಯಿ ರುಚಿಯಲ್ಲಿ ಹುಳಿಯಾಗಿರುತ್ತದೆ ಬೇಗಮ್ ಜಾನ್" ರಬ್ಬು ಅಸೂಯೆಯಿಂದ ಉರಿಯುತ್ತಾ ಪೂತ್ಕರಿಸಿದಳು.

ಆಗ ಬೇಗಂ ಜಾನ್‌ಳಿಗೆ ಮೈಮೇಲೆ ಬಂತು. ಕೆಲವೇ ಕ್ಷಣಗಳ ಹಿಂದೆ ನನಗೆ ಕೊಡುವೆನೆಂದ ಚಿನ್ನದ ಹಾರ ನೆಲದ ಮೇಲೆ ಎಸೆಯಲ್ಪಟ್ಟಿತು. ಮಸ್ಲಿನ್ ನೆಟ್‌ನ ದುಪಟ್ಟಾ ಹರಿದು ಚಿಂದಿಯಾಯಿತು. ಯಾವತ್ತೂ ಓರೆಯಾಗದ ಬೈತಲೆ ಸಿಕ್ಕುಸಿಕ್ಕಾಯಿತು.

ಓಹ್! ಓಹ್! ಓಹ್! ಅವಳು ಮೈ ಸೆಟೆಯುತ್ತ ಕಿರುಚಿದಳು. ನಾನು ಕೋಣೆಯಿಂದ ಹೊರ ಓಡಿದೆ.

ಬಹಳಷ್ಟು ಶೈತ್ಯೋಪಚಾರಗಳ ಬಳಿಕ ಬೇಗಮ್ ಜಾನ್ ಸರಿ ಹೋದಳು. ನಾನು ತುದಿಗಾಲಲ್ಲಿ ಒಳಗೆ ಇಣುಕಿ ನೋಡಿದಾಗ ರಬ್ಬು ಅವಳನ್ನು ಸೊಂಟಕ್ಕೆ